ಶ್ರೀ ಎಂ. ಎಸ್. ನಾಗನೂರ್.—ಹೌದು. ಈಗ ನೀರು ಇರುವುದರಿಂದ ಕಾಮಗಾರಿ ಕೆಲಸ ಪುರು ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

Restoration of Tavarekere Tank in Hebbur Hobli.

Q.—3673. Sri K. L. NARASIMHAIAH (Hebbur).—

Will the Government be pleased to state:—

(*a*) whether an estimate of Rs. 10,500 is prepared for the restoration of Tavarekere Tank in Hebbur Hobli;

(*b*) the action taken so far to implement the work;

(*c*) the reasons for the delay?

A.—Sri H. M. CHANNABASAPPA (Minister for Public Works and Electricity).—

(*a*) Yes.

(*b*) and (*c*) The estimate prepared recently is under scrutiny and the work will be taken up after the estimate is sanctioned.

ಶ್ರೀ ಕೆ. ಎಲ್. ನರಸಿಂಹಯ್ಯ.—ಆರು ವರ್ಷಗಳಿಂದ ಈ ಅಂದಾಜು ತಯಾರು ಮಾಡುವುದು ಪರಿಶೀಲನೆ ಮಾಡುವುದು ನಡೆಯುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

*ಶ್ರೀ ಎಂ. ಎಸ್. ನಾಗನೂರ್.—ಆರು ವರ್ಷಗಳಿಂದ ಎಂಬುದು ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಹಿಂದೆ ಮಾಡಿದ ಅಂದಾಜು 10,500 ರೂಪಾಯಿ ಅಲ್ಲವೆ?

Sri M. N. NAGHNOOR.—Estimates vary from day to day.

ಶ್ರೀ ಕೆ. ಎಲ್. ನರಸಿಂಹಯ್ಯ.—ಇದು ಮುಖ್ಯವಾದ ಕೆಲಸವಾದುದರಿಂದ ಕೂಡಲೇ ಕೆಲಸ ತೆಗೆದು ಕೊಳ್ಳುತ್ತೀರಾ?

ಶ್ರೀ ಎಂ. ಎಸ್. ನಾಗನೂರ್.—ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಪ್ರಯತ್ನ ಮಾಡುತ್ತೇವೆ, the estimate is under scrutiny ಎಂದು ಹೇಳುತ್ತಿದ್ದೀರಿ. The answer should be definite.

*Sri H. M. CHANNABASAPPA.—If it satisfies scrutiny and if it satisfies the conditions we have laid down in the matter of restoration of tanks, we will certainly take it up.

Lands owned by the Ex-Ruler of Sandur.

Q.—3749. Sri M. S. PATTAN (Ramdurg).—

Will the Government be pleased to state:—

(*a*) the acreage of land containing manganese ores in Sandur taluk which has been leased to the Ex-Ruler of Sandur;

(*b*) the acreage of land owned by him;

(*c*) the extent of land belonging to temples and held by him?

A.—Sri B. D. JATTI (Chief Minister).—

(*a*) About 29 sq. miles.

(*b*) 561 acres 28 cents.

(*c*) 2872 acres 79 cents.

ಶ್ರೀ ಎಂ. ಎಸ್. ಪಟ್ಟಣ್.—29 ಚದರ ಮೈಲಿ ಮ್ಯಾಂಗನೀಸ್ ಅದರು ಇರುವ ಪ್ರದೇಶವನ್ನು ಸಾಂದೂರಿನ ಮಾಜಿ ರಾಜರಿಗೆ ಲೀಸ್ ಕೊಟ್ಟಿದೆ ಎಂದು ಉತ್ತರ ಕೊಡಲಾಗಿದೆ. ಕೋಟಿಗಟ್ಟಲೆ ಪರಮಾನ ಬರುವವರಿಗೊಬ್ಬರಿಗೇ ಇದನ್ನು ಲೀಸ್, ಕೊಡಬಹುದೇ?

Sri B. D. JATTI.—The mining license has been given to the Raja of Sandur not by this Government but by the Madras Government when Sandur was in Madras State.

Sri C. K. RAJAIAH SETTY.—Can this Government not do anything in this matter?

Sri B. D. JATTI.—It was with the approval of the Government of India that the licence was given. So, we cannot do anything in this matter.

Sri C. K. RAJAIAH SETTY.—Is it not a fact that a mine owner cannot be given licence for more than 10 miles?

Sri B. D. JATTI.—It is a fact, but the Madras Government has done it after taking the special permission of the Government of India. The Government of India gave the special permission.

Sri A. BHEEMAPPA NAIK.—Is it not a fact that the licence has been given on the condition that he should start a ferro-manganese plant in that area?

Sri B. D. JATTI.—Yes.

Sri A. BHEEMAPPA NAIK.—If so, has he attempted to start one?

Sri B. D. JATTI.—He is attempting to start one provided electricity is supplied.

Sri A. BHEEMAPPA NAIK.—Will the Government be pleased to give him the necessary help such as electricity, etc.?

Sri B. D. JATTI.—If the Sharavathy Project is completed immediately, the Government will be able to supply power for this purpose immediately.

Dr. R. NAGAN GOWDA.—Is it not a fact that the current produced at Hospet within 10 miles of this mining area is being diverted to Chitaldrug and Tumkur and some of it taken as far away as Nellur instead of being supplied to the Raja of Sandur to start the ferro-manganese factory?

Sri B. D. JATTI.—Under the present circumstances we cannot supply because there is no sufficient electricity.

Sri J. B. MALLARADHYA.—Has it come to the notice of the Government that these 2,872 acres 79 cents are being misused by the Raja of Sandur to the detriment of the ryots of that locality?

Sri B. D. JATTI.—There are some complaints.

Sri J. B. MALLARADHYA.—What action has the Government taken to redress the grievances of those thousands of ryots?

Sri B. D. JATTI.—There are some legal points which have been raised. The Government is examining them and is also in correspondence with the Government of India.

ಶ್ರೀ ಎಂ. ಎಂ. ಜೆ. ನಜ್ಯೋಜಾತಪ್ಪಯ್ಯ.—ದೇವಸ್ಥಾನದ ಭೂಮಿಯನ್ನು ಇವರಿಗೆ ಹೇಗೆ ಕೊಡಲಾಗಿದೆ?

Sri B. D. JATTI.—He is the trustee of that temple and so he is in possession of those lands.

Sri G. DUGGAPPA.—May I know the number of years he has been holding these lands?

Sri B. D. JATTI.—Since many years. After the formation of the new Mysore State, there is no change.

Sri G. DUGGAPPA.—On what terms and conditions they have been leased out to him?

Sri B. D. JATTI.—There is an agreement.

Sri B. E. RAMAIAH.—May I know whether there is any proposal before Government to nationalise mines and ores in Bellary District?

Mr. SPEAKER.—That is a general question.

ಶ್ರೀ ಎ. ಜೆ. ದೊಡ್ಡಮೇಟಿ.—ಈ 2,872 ಎಕರೆ ಭೂಮಿ ದೇವಸ್ಥಾನಕ್ಕೆ ಸಂಬಂಧಪಟ್ಟದ್ದೊ ಅಥವ ಅರಸರಿಗೆ ಸಂಬಂಧ ಪಟ್ಟದ್ದೊ?

ಅಧ್ಯಕ್ಷರು.—ದೇವಸ್ಥಾನದ್ದು ಎಂದು ಹೇಳಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಯಾವ ಕಾರಣದಿಂದ ಅದನ್ನು ಅರಸರು ಉಪಯೋಗ ಮಾಡುತ್ತಿದ್ದಾರೆ?

ಶ್ರೀ ಬಿ. ಡಿ. ಜತ್ತಿ.—ಟ್ರಸ್ಟಿ ಆಗಿ.

ಶ್ರೀ ಜಿ. ಎಸ್. ಪುಟ್ಟಣ್ಣ.—ಕೇಂದ್ರ ಸರ್ಕಾರ ಲೈಸೆನ್ಸ್ ಕೊಡುವವರೆಂದು ಹೇಳಿದಿರಿ.....

ಶ್ರೀ ಬಿ. ಡಿ. ಜತ್ತಿ.—ಕೇಂದ್ರ ಸರ್ಕಾರ ಎಂದು ಹೇಳಲಿಲ್ಲ, ಮದರಾಸು ಸರ್ಕಾರ ಕೊಡಬೇಕೆಂದು ಮಾಡಿದರು, ಕೇಂದ್ರ ಸರ್ಕಾರ ಒಪ್ಪಿದರು.

ಶ್ರೀ ಜಿ. ಎಸ್. ಪುಟ್ಟಣ್ಣ.—ಮದರಾಸು ಸರ್ಕಾರ ಕೊಟ್ಟರು, ಕೇಂದ್ರ ಸರ್ಕಾರ ಒಪ್ಪಿದರೆಂದು ಹೇಳಿದೀರಿ ಈಚೆಗೆ ಹೀಗೆ ತೊಂದರೆಯಾಗಿದೆ ಎಂದು ಕೇಂದ್ರ ಸರ್ಕಾರಕ್ಕೆ ಬರೆಯುವುದಕ್ಕಾಗುವುದಿಲ್ಲವೆ? ದೇವಸ್ಥಾನದ ಸ್ವತ್ತನ್ನೂ ಅವರಿಗೆ ಕೊಟ್ಟಿರುವುದರಿಂದ ರೈತರಿಗೆ ತೊಂದರೆಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಬೇಗ ಪ್ರಶ್ನೆ ಕೇಳುತ್ತಾರೆ, ಉತ್ತರ ಹೇಳಲು ನನಗೆ ಗೊತ್ತಾಗುವುದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಕೇಂದ್ರ ಸರ್ಕಾರಕ್ಕೆ ಬರೆಯಲಾಗುವುದಿಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಮೈನಿಂಗ್ ಲೈಸೆನ್ಸ್ ಬೇರೆ, ಇತರ ಭೂಮಿಯ ವಿಷಯವೇ ಬೇರೆ.

Sri M. C. NARASIMHAN.—Was the concession given because he was a supporter of the Congress Party?

Sri B. D. JATTI.—It is not correct.

ಶ್ರೀ ಎಂ. ಎಸ್. ಪಟ್ಟಣ್.—2,872 ಎಕರೆ ದೇವಸ್ಥಾನದ ಭೂಮಿ ಇದೆ. ಇದನ್ನು ಹೊಸ ಹೊಸ ರೈತರಿಗೆ ಹೆಚ್ಚು ದೇಣಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಬಿ. ಡಿ. ಜತ್ತಿ.—ಬಂದಿಲ್ಲ.

ಶ್ರೀ ವಿ. ಕುಮಾರನಾಯಕ್.—ಈ ಭೂಮಿಯ ವಾರ್ಷಿಕ ಉತ್ಪತ್ತಿ ಎಷ್ಟು, ಖರ್ಚೆಷ್ಟು ಎಂಬ ಬಗ್ಗೆ ಸರಿಯಾದ ಲೆಕ್ಕಗಳಿವೆಯೇ?

ಶ್ರೀ ಬಿ. ಡಿ. ಜತ್ತಿ.—ಟ್ರಸ್ಟಿ ಆದಮೇಲೆ ಈ ಲೆಕ್ಕ ಗಳನ್ನಿಡಬೇಕಾಗುತ್ತದೆ.

Mr. SPEAKER.—Next question.

Sri G. DUGGAPPA.—This is an important question and so some more supplementaries may be allowed.

Mr. SPEAKER.—No.